ನಿ-330
ಕ್ರಿ - 77 146ನೇ(ಆ) ಧಾರ್ಮಿಕ
ಕಂಪ್ಯೂಟರ್

**ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂ ರವರು ನಿಯಮ 330ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.**

*******

ಪ್ರಶ್ನೆ: ಇತ್ತೀಚಿನ ದಮನಕಾರಿ ಗೋಹತ್ಯೆ ನಿಷೇಧ ಕಾಯ್ದೆ ಮತ್ತು ಮತಾಂತರ ನಿಷೇಧ ಮಸೂದೆಗಳು ಧಾರ್ಮಿಕ ಅಲ್ಪಸಂಖ್ಯಾತರ ಆರ್ಥಿಕ ಮತ್ತು ಧಾರ್ಮಿಕ ಹಕ್ಕುಗಳನ್ನು ದಮನ ಮಾಡುತ್ತಿರುವ ಬಗ್ಗೆ ಹಾಗೂ ಅಲ್ಪ ಸಂಖ್ಯಾತರ ವಿರೋಧಿ ನೀತಿಗಳಿಂದಾಗಿ ಶಾಂತಿ ಸಹಿಷ್ಣುತೆ ಮತ್ತು ಸೌಹಾರ್ದತೆ ರಾಜ್ಯದ ಮೇರು ಗುರುತಾಗಿ ಉಳಿದಿಲ್ಲದಿರುವ ಬಗ್ಗೆ ಹಾಗೂ ಅಲ್ಪಸಂಖ್ಯಾತರ ಮೇಲೆ ಮತ್ತು ಅವರ ಆರಾಧನ ಮಂದಿರಗಳ ಮೇಲೆ ದಾಳಿ ನಡೆಯುತ್ತಿರುವುದರಿಂದ ಮಾನಗೇಡಿ ಹತ್ಯೆಗಳು, ಮತೀಯ ಗೂಂಡಾಗಿರಿ, ಧಾರ್ಮಿಕ ಗುಂಪುಗಳ ನಡುವೆ ಜಗಳ ಹಗೆತನ, ಮತ್ತು ಶಾಸಕರ ಸಂವಿಧಾನ ಬಾಹಿರ ಹೇಳಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವುದರಿಂದ ಸಮಾಜ ವಿದ್ರೋಹಿ ಗುಂಪುಗಳ ವಿರುದ್ಧ ರಾಜ್ಯ ಸರ್ಕಾರ ಕ್ರಮಕೈಗೊಳ್ಳುವಲ್ಲಿ ವಿಫಲವಾಗಿರುವ ಬಗ್ಗೆ.

ಉತ್ತರ: ರಾಜ್ಯದಲ್ಲಿ ಬಲವಂತ ಮತಾಂತರ, ಅಲ್ಪ ಸಂಖ್ಯಾತರ ಮೇಲಿನ ಹಾಗೂ ಅವರ ಆರಾಧನ ಮಂದಿರಗಳ ಮೇಲಿನ ದಾಳಿ, ಮರ್ಯಾದೆ ಹತ್ಯೆ, ಮತೀಯ ಗೂಂಡಾಗಿರಿ, ಧಾರ್ಮಿಕ ಗುಂಪುಗಳ ನಡುವಿನ ಹಗೆತನ ಕುರಿತು ದಾಖಲಾದ ಪ್ರಕರಣಗಳಲ್ಲಿ ಪೊಲೀಸ್ ಇಲಾಖಾ ವತಿಯಿಂದ ಅಪರಾಧಿಗಳ ವಿರುದ್ಧ ಕಠಿಣ ಕಾನೂನಾತ್ಮಕ ಕ್ರಮಗಳನ್ನು ನಿಷ್ಪಕ್ಷವಾಗಿ ಕೈಗೊಳ್ಳಲಾಗುತ್ತಿದೆ. ಸದರಿ ಪ್ರಕರಣಗಳನ್ನು ತಡೆಗಟ್ಟಲು ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ರಾಜ್ಯಾದ್ಯಂತ ಮತೀಯವಾಗಿ ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುವ ಕಿಡಿಗೇಡಿಗಳ ವಿರುದ್ಧ ಕಮ್ಯುನಲ್ ಗೂಂಡಾ ಶೀಟ್‌ಗಳನ್ನು ತೆರೆಯಲಾಗುತ್ತಿದೆ.
- ಪೊಲೀಸ್ ಇಲಾಖೆಯ ವತಿಯಿಂದ ಸಾಮಾಜಿಕ ಜಾಲತಾಣಗಳ ಮೇಲೆ ಸಹಾ ನಿಗಾ ಇರಿಸಿ ಅದರಲ್ಲಿ ಪ್ರಚೋದನಾಕಾರಿ ಪೋಸ್ಟ್‌ಗಳನ್ನು ಭಿತ್ತರಿಸುವವರ ಮೇಲೆ ಪ್ರಕರಣವನ್ನು ದಾಖಲಿಸಲಾಗುತ್ತಿದೆ.
- ಮತೀಯ ಅಂಶವುಳ್ಳ ಪ್ರತಿಯೊಂದು ಸಣ್ಣ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಮುದಾಯದ ಮುಖಂಡರನ್ನು ಒಟ್ಟುಗೂಡಿಸಿ ನಾಗರಿಕ ಸಮುದಾಯ ಶಾಂತಿ ಸಭೆಗಳನ್ನು ಪೊಲೀಸ್ ಠಾಣಾ ಮಟ್ಟದಲ್ಲಿ ನಡೆಸಲಾಗುತ್ತಿದೆ.
- ಅಂತರ್ ರಾಜ್ಯ/ಜಿಲ್ಲೆಯ ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಹಾಕಿ ಯಾವುದೇ ರೀತಿಯ ಸಮಾಜ ಘಾತಕ ಶಕ್ತಿಗಳು ಜಿಲ್ಲಾ/ನಗರವನ್ನು ಪ್ರವೇಶಿಸದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.
- ಸಮಾಜದಲ್ಲಿ ಶಾಂತಿ ಕದಡುವ ಕೃತ್ಯ ಎಸಗುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಆರೋಪಿಗಳನ್ನು ದಸ್ತಗಿರಿ ಮಾಡಲಾಗುತ್ತಿದೆ.
- ಯಾವುದೇ ಘಟನೆಗಳು ನಡೆದ ತಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಮುಂಜಾಗ್ರತೆಯಾಗಿ ಮಾಹಿತಿ ಸಂಗ್ರಹಣೆ ಸ್ಥಾಯಿ ಆದೇಶ 1017 ಹಾಗೂ 1032ರ ರೀತ್ಯಾ ಸಮರ್ಪಕ ಬೀಟ್‌ಜಾರಿ ರೌಡಿ ಮತ್ತು ಕಮ್ಯೂನಲ್ ಗೂಂಡಾ ಆಸಾಮಿಗಳ ಮೇಲೆ ನಿಗಾಇಡುವುದು.
- ಕಲಂ: 107 ಸಿಆರ್‌ಪಿಸಿ ರೀತ್ಯಾ ಸದರಿ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಹಾಗೂ ಬೌಂಡ್ ಓವರ್ ಮಾಡಿಸುವುದು.

...2...

- ಸಾರ್ವಜನಿಕ ಸುರಕ್ಷತಾ ಅಧಿನಿಯಮ-2018ರ ಅಡಿಯಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಸಿ.ಸಿ ಕ್ಯಾಮರಾಗಳ ಅಳವಡಿಸುವುದು ಹಾಗೂ ಮುಂತಾದ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಗುಪ್ತಚರ ಮಾಹಿತಿ ಸಂಗ್ರಹಣೆ ಮತ್ತು ಬೀಟ್ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸಿ, ಮೂಲಭೂತವಾದಿ ಗುಂಪುಗಳು ಅಥವಾ ಸಮಾಜ ವಿರೋಧಿ ಅಂಶಗಳ ಮೇಲೆ ನಿಗಾ ಇಡಲಾಗುತ್ತಿದೆ. ಇಂತಹ ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗುವವರ ಮೇಲೆ ಗೂಂಡಾ ಕಾಯಿದೆ ಹಾಕಲಾಗುವುದು. ಅಲ್ಲದೇ ನಿಯಮಿತ ಗಸ್ತು ಸುತ್ತುಗಳನ್ನು, ನೈಟ್ ರೌಂಡ್ ಮತ್ತು ಸೆಕ್ಟರ್ ಸುತ್ತುಗಳನ್ನು ಕಟ್ಟುನಿಟ್ಟಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ. ಗುಡ್ ಮಾರ್ನಿಂಗ್ ಬೀಟ್ ಅನ್ನು ನಿಯಮಿತವಾಗಿ ನಿಯೋಜಿಸಲಾಗುತ್ತದೆ ಮತ್ತು ಎಲ್ಲಾ ಮಸೀದಿಗಳು, ಚರ್ಚ್‌ಗಳು, ದೇವಾಲಯಗಳಿಗೆ ಭೇಟಿ ನೀಡಲಾಗುತ್ತಿದೆ.

**ಸಂಖ್ಯೆ: ಒಇ 305 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು